ನೆನಪಿಲ್ಲ, ಅವರೆಲ್ಲ ಬಂದು ಹೊಡೆದಾಟ ತಪ್ಪಿಸದಿದ್ದರೆ ಇಬ್ಬರಲ್ಲೊಬ್ಬರು ಖತಂ ಆಗುತ್ತಿದ್ದಿದ್ದು ಸುಳ್ಳಾಗಿರಲಿಲ್ಲ.

ಇಷ್ಟೆಲ್ಲ ಆದರೂ ಕಾಗಾಲು ಜಾತ್ರೆಯಲ್ಲಿ ತೋರಣ ಮಾತ್ರ ಕಾಮಾಕ್ಷಿ ಮನೆಯ ಸರ್ತಕ್ಕೇ ಕಟ್ಟಿ ಮಜ್ಜಿಗೆ ಬೊಡ್ಡೆಯನ್ನೂ ಇಡಲಾಗಿತ್ತು. ಮಜ್ಜಿಗೆ ಕುಡಿಯುವ ನೆಪದಲ್ಲಿ ಹುಡುಗರ ದಂಡು ಕಾಮಾಕ್ಷಿಯ ಮನೆಯೆದುರು, ಚಿಟ್ಟೆ ಮೇಲೆ, ಹಿತ್ತಲ ಕಡೆಗಿದ್ದ ಬಚ್ಚಲು ಮನೆಯ ಆಸುಪಾಸು ಬೀಡುಬಿಡುತ್ತಿತ್ತು. ತೊಳೆದು ದಾರಕ್ಕೆ ಹರಗಿದ ಸೀರೆ, ಪಲಕಗಳ ಬಗ್ಗೆ ಏಳುವ ದೊಡ್ಡ ದೊಡ್ಡ ಮಾತುಗಳು ಕಾಮಾಕ್ಷಿ ಮನೆಯ ಗೋಡೆ ದಾಟಿ ಸುಜಾತಾಳ ಕಿವಿಗಳನ್ನೂ ತುಂಬಿದ್ದವು. ಜಾತ್ರೆ ಎಂದರೆ ಕೇಳಬೇಕೆ, ತಮ್ಮ ತಮ್ಮ ಪಾಡಿಗೆ ನಡೆದುಹೋಗುತ್ತಿದ್ದ ಹೆಣ್ಣುಮಕ್ಕಳಾದರೂ ಸರಿಯೇ ರಶ್ಶಿನ ನೆಪದಲ್ಲಿ ಗಂಡಸರ ಕೈ ಹೆಣ್ಣು ಮಕ್ಕಳ ಕಾಲನ್ನೋ, ಸೊಂಟವನ್ನೋ ಒಮ್ಮೊಮ್ಮೆ ಎದೆಯನ್ನೇ ಪಟಕ್ಕನೆ ಸ್ಪರ್ಶಿಸುತ್ತ ಹಾಯುವುದಿರುವಾಗ, ಪ್ರಾಯದ ಮಗಳಿರುವ ಮನೆಯ ಸರ್ತಕ್ಕೇ ಮಜ್ಜಿಗೆ ಸೇವೆಯಿಟ್ಟರೆ ಆಸುಪಾಸು ಹೊಲಸು ನೊಣಗಳು ಹಾರಾಡುವುದು ತಪ್ಪುತ್ತದೆಯೇ?

ಪುಂಡ ಪೋಕರಿಗಳ ಕಲ್ಲಿಗೆ ಕಾಮಾಕ್ಷಿ ಮನೆಯ ಹೆಂಚುಗಳಿಷ್ಟು ಒಡೆದವಂತೆ, ಮನೆಯ ಆಚೀಚಿಗಿನ ಗೋಡೆಗಳ ಮೇಲೆ ಹೃದಯದ ಚಿತ್ರ ಬಿಡಿಸಿ, ಒಂದು ಬಾಣ ಹೊಡೆದು ಸುಜಾತಾಳ ಹೆಸರಿನ ಜೊತೆ ಊರಮೇಲಿನ ಒಂದಿಷ್ಟು ಹುಡುಗರ ಹೆಸರನ್ನು ಮಶಿಕೆಂಡದಲ್ಲಿ ಬರೆಯಲಾಗಿತ್ತೆಂದು ಕಾಮಾಕ್ಷಿಯೇ ಮಹೇಶನಲ್ಲಿ ಖುದ್ದು ದುಃಖ ತೋಡಿಕೊಂಡಿದ್ದಳು. ಇದಕ್ಕೂ ಮಿಗಿಲಾಗಿ ಬಿಸಿಲಿಗೆ ಹರಗಿದ ಸುಜಾತಾಳ ಕೆಲವು ಒಳವಸ್ತ್ರಗಳೆಲ್ಲ ಕಳೆದುಹೋದವಂತೆ. ಇದಕ್ಕೆಲ್ಲ ಕಾರಣ ರಾಗುವಿನ ಹಟವೇ ಅಲ್ಲವೇ... ಅಲ್ಲದೆ, ಅಂದಿನ ರಾಗು ಮಹೇಶರ ಗಲಾಟೆಯಲ್ಲಿ ಇಬ್ಬರೂ ಸಮಕ್ಕೆ ಸಮ ಬಡಿದಾಡಿಕೊಂಡರೂ ಕೊನೆಗೂ ತೋರಣ ಕಾಮಾಕ್ಷಿ ಮನೆಯ ಬದಿಗೇ ಕಟ್ಟಿ ರಾಗುವೇ ಗೆದ್ದಂತೆ ಆಯ್ತಲ್ಲ ಎಂಬುದೂ ಮಹೇಶನ ದ್ವೇಷಕ್ಕೆ ಹೆಳೆಯಾಯಿತು. ರಾಗುವೂ ಪಟ್ಟುಬಿಡದೆ ಬೆಂಕಿಗೆ ತುಪ್ಪ ಸುರಿದಂತೆ ಹೋದಲ್ಲೆಲ್ಲ ಮಹೇಶನ ಸೋಲಿಗೆ ಹೊಂಚುತ್ತಲೇ ಇರುತ್ತಿದ್ದ.

ಕಾಗಾಲು ಜಾತ್ರೆಯ ದಿನದಿಂದ ಶುರುವಾದ ಮಹೇಶ ರಾಗುವಿನ ನಡುವಿನ ದ್ವೇಷ ದಿನಗಳುರುಳಿದಂತೆ ಇನ್ನೂ ಬೆಳೆಯುತ್ತಲೇ ಇತ್ತು. ದ್ವೇಷ ಯಾವ ರೀತಿಯಲ್ಲಿ ಮುಕ್ತಾಯವಾಗುತ್ತದೆಯೆಂಬುದು ಸ್ವತಃ ಅವರಿಬ್ಬರಿಗೇ ತಿಳಿದಿರಲಿಲ್ಲ. ಅವರವರದೇ ಗುಂಪುಕಟ್ಟಿಕೊಂಡು ರಂಪ ಮಾಡಿಕೊಳ್ಳುತ್ತ ತಿರುಗುತ್ತಿದ್ದರೂ ತಮ್ಮನ್ನು ತಾವು ಪ್ರಭಾವಿ ವ್ಯಕ್ತಿಗಳೆಂಬಂತೆ ಬಿಂಬಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ.

ಹೀಗೆಲ್ಲ ನಡೆದಿರುವಾಗ ಕುಮಟೆಯಲ್ಲಿ ಅಚಾನಕ್ಕಾಗಿ ನಡೆಯುವ ಗಲಾಟೆಯ ಪಾಯ್ದೆ ತಗೊಳ್ಳುವ ಉಪಾಯ ಮಹೇಶನ ತಲೆಗೆ ಹೊಳೆದದ್ದರಲ್ಲಿ ಯಾವ ಸೋಜಿಗವೂ ಇರಲಿಲ್ಲ. ತನ್ನ ಪೈದಾಳದಲ್ಲಿರುವ ಅತೀ ಹತ್ತಿರದವರನ್ನು ಹುರಿದುಂಬಿಸಿ, ತಾನು ಅವರಿಗೆ ಮಾಡಿದ ಸಹಾಯವನ್ನೆಲ್ಲ ನೆನಪಿಸಿ ರಾಗುವಿನ ಮೇಲೆ ಸೇಡುತೀರಿಸಿಕೊಳ್ಳಲು ಅವರನ್ನು ತಯಾರು ಮಾಡಿಯೇಬಿಟ್ಟ. ಗುಂಪು ಕಟ್ಟಿಕೊಂಡು ಒಬ್ಬನನ್ನು ದ್ವೇಷಿಸಬೇಕಾದರೆ ಗುಂಪಿನಲ್ಲಿದ್ದವರೆಲ್ಲರೂ ಆ ಒಬ್ಬನನ್ನು ಅಷ್ಟೇ ದ್ವೇಷಿಸುವ ಅನಿವಾರ್ಯತೆ ಇದ್ದೇ ಇರುತ್ತದೆ. ಆ ಉರಿಯನ್ನು ಆರದಂತೆ ಕಾಪಿಟ್ಟುಕೊಂಡುಹೋಗುವ ಜವಾಬ್ದಾರಿ ಈಗ ಮಹೇಶನ ಮೇಲಿತ್ತಷ್ಟೇ!

## 2

ಎರಡು ದಿನದಿಂದ ಸರಿಯಾಗಿ ಮಾರಾಟವಾಗದೇ ಉಳಿದ ಬಂಗಡೆ, ಮಳ್ವಿಗಳನ್ನೆಲ್ಲ